**ಸಸ್ಯ ಪ್ರಚೋದಕಗಳ ಉಪಯೋಗ:** ಅನಾನಸ್‌ನಲ್ಲಿ ಅಸಮ ಹೂ ಬಿಡುವಿಕೆಯನ್ನು ಹೋಗಲಾಡಿಸಲು ನಾಟಿ ಮಾಡಿದ 13–14 ತಿಂಗಳ ನಂತರ ಅಥವಾ ಸಸಿಗಳು 37–38 ಎಲೆಗಳನ್ನು ಹೊಂದಿರುವಾಗ ಅವುಗಳನ್ನು ಉಪಚರಿಸಬೇಕು. ನ್ಯಾಫ್ತಲಿನ್ ಅಸೆಟಿಕ್ ಆಮ್ಲವನ್ನು (ಎನ್.ಎ.ಎ.) 10 ಪಿ. ಪಿ. ಎಮ್ ಪ್ರಮಾಣದಲ್ಲಿ ಶೇ. 2 ರ ಯೂರಿಯಾ ಜೊತೆಗೆ ಅಥವಾ 100 ಪಿ.ಪಿ.ಎಮ್. ಎಥ್ರೆಲ್ (1 ಗ್ರಾಂ ಪ್ರತಿ 10 ಲೀಟರ್ ನೀರಿಗೆ) ಇಥ್ರೆಲ್ ಅಥವಾ 25 ಪಿ.ಪಿ.ಎಮ್. ಇಥ್ರೆಲ್, ಶೇ. 2ರ ಯೂರಿಯಾ ಹಾಗೂ ಶೇ. 0.04ರ ಸೋಡಿಯಂ ಕಾರ್ಬೋನೇಟ್‌ಗಳ ಮಿಶ್ರಣವನ್ನು ತಯಾರಿಸಿ, ಪ್ರಸಸಿಯುಸುಳಿಯಲ್ಲಿ 50 ಮಿ.ಲೀ. ದ್ರಾವಣವನ್ನು ಹಾಕಿ, ಸಸಿಗಳನ್ನು ಉಪಚರಿಸಬೇಕು. ನಂತರ 40–45 ದಿನಗಳಲ್ಲಿ ಸಸಿಗಳು ಹೂ ಬಿಡಲು ಪ್ರಾರಂಭಿಸುತ್ತವೆ. ಹಣ್ಣಿನ ಗಾತ್ರ ಹೆಚ್ಚಿಸಲು 200 ಪಿ.ಪಿ.ಎಂ. ನ್ಯಾಫ್ತಲಿನ್ ಅಸೆಟಿಕ್ ಆಮ್ಲವನ್ನು ಕಾಯಿ ಕಚ್ಚಿದ 2–3 ತಿಂಗಳುಗಳ ನಂತರ ಸುರಿದು ಉಪಚರಿಸಬೇಕು.

**ಹಣ್ಣು ಬೆಳವಣಿಗೆ ಮತ್ತು ಕೊಯ್ಲು :** ನಾಟಿ ಮಾಡಿದ 12 ತಿಂಗಳ ನಂತರ ಅನಾನಸ್ ಬೆಳೆ ಹೂ ಬಿಡುತ್ತದೆ. ನಂತರ ನಾಲ್ಕೂವರೆಯಿಂದ ಐದುವರೆ ತಿಂಗಳುಗಳಲ್ಲಿ ಹಣ್ಣು ಕೊಯ್ಲಿಗೆ ಸಿದ್ಧವಾಗುತ್ತದೆ. ಸಂಸ್ಕರಿಸಿದ ಡಬ್ಬಿಗಳಲ್ಲಿ ಶೇಖರಿಸಿಡಲು ಹಣ್ಣುಗಳ ಬಣ್ಣ ಹಳದಿ ಬಣ್ಣಕ್ಕೆ ತಿರುಗಿದಾಗ ಕೊಯ್ಲು ಮಾಡಬೇಕು. ನೇರ ಸೇವನೆಗೆ ಹಣ್ಣು ಪೂರ್ಣ ಪಕ್ವವಾಗುವವರೆಗೆ ಗಿಡದಲ್ಲಿ ಬಿಡುವುದೊಳಿತು. ಹಣ್ಣುಗಳನ್ನು ಚಾಕುವಿನಿಂದ ತಳಭಾಗದಲ್ಲಿ 2–4 ಸೆಂ.ಮೀ. ಉದ್ದ ಕಾಂಡದೊಂದಿಗೆ ಕತ್ತರಿಸಿ ಕೊಯ್ಲು ಮಾಡಬೇಕು. ಕೊಯ್ಲಿನ ನಂತರ ಹಣ್ಣುಗಳನ್ನು ಕ್ರೌನ್‌ಗಳೊಂದಿಗೆ 3–4 ವಾರ ಕೆಡದಂತಿಡಬಹುದು.

**ಇಳುವರಿ :** ಪ್ರತಿ ಎಕರೆಗೆ 24–28 ಟನ್ ಹಣ್ಣಿನ ಇಳುವರಿ ನಿರೀಕ್ಷಿಸಬಹುದು.

**ಸಸ್ಯ ಸಂರಕ್ಷಣಾ ಕ್ರಮಗಳು**

1. ಹಿಟ್ಟು ತಿಗಣೆ: ಕೆಂಪು ಮಿಶ್ರಿತ ಬಿಳಿ ಹಿಟ್ಟಿನಂತಹ ತಿಗಣೆಗಳು ಬೇರುಗಳಿಂದ ಕಂದುಗಳಿಂದ ಮತ್ತು ಹಣ್ಣುಗಳಿಂದ ರಸವನ್ನು ಹೀರುತ್ತವೆ. ಬಾಧೆಗೊಳಗಾದ ಗಿಡಗಳ ಎಲೆಗಳು ಕೆಂಪು ಬಣ್ಣಕ್ಕೆ ತಿರುಗುತ್ತವೆ ಮತ್ತು ಎಲೆಗಳ ತುದಿಗಳು ಒಣಗುತ್ತವೆ. **ನಿರ್ವಹಣಾ ಕ್ರಮಗಳು:** ನಾಟಿಗೆ ಮುಂಚೆ ಕಂದುಗಳನ್ನು 1.7 ಮಿ.ಲೀ ಡೈಮಿಥೋಯೇಟ್ 30 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿದ ದ್ರಾವಣದಲ್ಲಿ ಕನಿಷ್ಠ ಅರ್ಧ ಗಂಟೆಯವರೆಗೆ ಅದ್ದಿ ತೆಗೆಯಬೇಕು. ಎಕರೆಗೆ 7 ಕಿ.ಗ್ರಾಂಗಳಂತೆ ಫೋರೇಟ್ 10 ಜಿ. ಮಣ್ಣಿಗೆ ಭೂಮಿಯಲ್ಲಿ ಸೇರಿಸುವುದು. ಹಿಟ್ಟು ತಿಗಣೆ ಬಾಧೆ ಮತ್ತೆ ಕಾಣಿಸಿಕೊಂಡಾಗ 1 ಮಿ.ಲಿ. ಡೈಕ್ಲೋರೋವಾಸ್ 76 ಇ.ಸಿ ಸಿಂಪರಿಸುವುದು.

**2. ಗೆದ್ದಲು:** ಗೆದ್ದಲು ಹುಳುಗಳು ಮಣ್ಣಿನ ಮೇಲೆ ಪದರವನ್ನು ನಿರ್ಮಿಸಿ ನಂತರ ಮರಿ ಕಂದುಗಳನ್ನು ತಿನ್ನುತ್ತವೆ. 10 ಮಿ.ಲೀ. ಕ್ಲೋರೋಪೈರಿಫಾಸ್ 20 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಎಕರೆಗೆ 200 ಲೀಟರ್‌ನಂತೆ ಮಣ್ಣಿಗೆ ಸಿಂಪಡಿಸಬೇಕು. ಮಣ್ಣಿನ ತೇವಾಂಶವನ್ನು ಕಾಪಾಡಿಕೊಳ್ಳುವುದು.

**3. ಸೊರಗು ರೋಗ:** ಕೆಳಗಿನ ಎಲೆಗಳು ಹಳದಿ ವರ್ಣಕ್ಕೆ ತಿರುಗಿ ಇಡೀ ಸಸಿಯೇ ಸೊರಗಿ ಒಣಗುತ್ತದೆ. ನಾಟಿ ಮಾಡುವಾಗ ತಳಭಾಗದಲ್ಲಿ ಕಂದು ಬಣ್ಣಕ್ಕೆ ತಿರುಗಿದ ಮತ್ತು ಒಣಗಿದ ಎಲೆಗಳನ್ನು ಕಿತ್ತು ತೆಗೆಯಬೇಕು. ರೋಗಮುಕ್ತ ಪ್ರದೇಶಗಳಿಂದ ಕಂದುಗಳನ್ನು ಆರಿಸುವುದರಿಂದ ಸೊರಗು ರೋಗವನ್ನು ನಿಯಂತ್ರಿಸಬಹುದು.

**4. ಸುಳಿಕೊಳೆಯುವ/ಕಾಂಡ ಕೊಳೆಯುವ ರೋಗ:** ಸುಳಿಯ ಕೆಳಗಿನ ಎಲೆಗಳು ವಿವರ್ಣಗೊಂಡು ಬಾಡುತ್ತವೆ. ನಂತರ ಸುಳಿಯು ಕೊಳೆಯಲು ಪ್ರಾರಂಭಿಸಿ, ದುರ್ವಾಸನೆ ಬರುತ್ತದೆ. ರೋಗ ತೀವ್ರವಾಗಿದ್ದಲ್ಲಿ ಕಾಂಡವೂ ಕೂಡ ಕೊಳೆತು ಇಡೀ ಗಿಡವೇ ಸಾಯುತ್ತದೆ. ಪ್ರತಿ ಲೀಟರ್ ನೀರಿಗೆ 2 ಗ್ರಾಂ. ಜೈನೆಬ್ ಅಥವಾ 2 ಗ್ರಾಂ. ಮ್ಯಾಂಕೋಜೆಬ್ 75 ಡಬ್ಲ್ಯೂ.ಪಿ. ಅಥವಾ 3 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯೂ.ಪಿ. ಬೆರೆಸಿ ಸಿಂಪರಿಸಬೇಕು.

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ**

**ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ. ಕಂಕನಾಡಿ, ಮಂಗಳೂರು – 575 002**

# ಅನಾನಸ್ ಬೆಳೆಯ ಬೇಸಾಯ ಕ್ರಮಗಳು





**ತಾಂತ್ರಿಕ ಮಾಹಿತಿ:**
**ಡಾ. ರಶ್ಮಿ ಆರ್, ಡಾ. ರಮೇಶ, ಟಿ. ಜೆ.,**
**ಡಾ. ಚೇತನ್ ಎನ್., ಡಾ. ಕೇದಾರನಾಥ,**
**ಡಾ. ನವೀನ್ ಕುಮಾರ್, ಬಿ. ಟಿ.,**
**ಮತ್ತು ಡಾ. ಮಲ್ಲಿಕಾರ್ಜುನ ಎಲ್.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
**ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,**
**ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು,**
**ಕಂಕನಾಡಿ ಅಂಚೆ,**
**ಮಂಗಳೂರು, ದಕ್ಷಿಣ ಕನ್ನಡ – 575002**
www.kvkdk.org, kvkdk@rediffmail.com
**0824–2431872**

ಅನಾನಸ್ ರುಚಿಕರವಾದ ಉಷ್ಣವಲಯದ ಮತ್ತು ರಸಭರಿತವಾದ ಆಹ್ಲಾದಕರ ಸುವಾಸನೆಯುಳ್ಳ ಹಣ್ಣು, ಈ ಹಣ್ಣಿನಲ್ಲಿ 'ಎ', 'ಬಿ' ಮತ್ತು 'ಸಿ' ಜೀವಸತ್ವಗಳು ಮತ್ತು ಕೆಲ ಖನಿಜಗಳು ಹೇರಳವಾಗಿವೆ. ಕರಾವಳಿ ಪ್ರದೇಶಗಳಲ್ಲಿ ಅನಾನಸ್ ಚೆನ್ನಾಗಿ ಬೆಳೆಯುತ್ತದೆ. ಮಲೆನಾಡು ಪ್ರದೇಶಗಳಾದ ಶಿರಸಿ, ಸಾಗರ, ಸೊರಬ ತಾಲ್ಲೂಕುಗಳಲ್ಲಿ ಸಹ ಇದನ್ನು ಚೆನ್ನಾಗಿ ಬೆಳೆಯಬಹುದು.

**ಮಣ್ಣು :** ಅನಾನಸ್ ಎಲ್ಲಾ ವಿಧವಾದ ಮಣ್ಣಿನಲ್ಲಿ ಬೆಳೆಯಬಹುದಾದರೂ ಮರಳು ಮಿಶ್ರಿತ ಹಗುರ ಮಣ್ಣು ಈ ಬೆಳೆಗೆ ಸೂಕ್ತ. ಜೇಡಿ ಮಣ್ಣು ಉತ್ತಮವಲ್ಲ. ಇದಕ್ಕೆ ಉತ್ತಮ ನೀರಾವರಿ ಸೌಲಭ್ಯ ಮತ್ತು ಚೆನ್ನಾಗಿ ನೀರು ಬಸಿದು ಹೋಗುವಂತಹ ಮಣ್ಣು ಬೇಕು. ಭೂಮಿಯೊಳಗಿನ ನೀರಿನ ಮಟ್ಟ ಮೇಲಿರುವಂತಹ ತಗ್ಗು ಪ್ರದೇಶಗಳು ಯೋಗ್ಯವಲ್ಲ.

**ಹವಾಗುಣ ಮತ್ತು ನಾಟಿ ಕಾಲ:** ಬೆಚ್ಚಗಿರುವ ಹಾಗೂ ತೇವಾಂಶವಿರುವ ಎರಡೂ ಹವಾಮಾನಗಳಲ್ಲಿ ಈ ಬೆಳೆ ಚೆನ್ನಾಗಿ ಬರುತ್ತದೆ. ಈ ಬೆಳೆಯನ್ನು 600–4000 ಮಿ.ಮೀ. ಮಳೆ ಬರುವ ಪ್ರದೇಶಗಳಲ್ಲಿ ಬೆಳೆಯಬಹುದು. ಜೂನ್ ತಿಂಗಳು ಅನಾನಸ್ ನಾಟಿಗೆ ಸೂಕ್ತ ಕಾಲ

**ತಳಿಗಳು: ಕ್ಯೂ :** ಈ ತಳಿಯ ಹಣ್ಣುಗಳನ್ನು ಸಂಸ್ಕರಿಸಿ ಡಬ್ಬಗಳಲ್ಲಿ ಶೇಖರಿಸಿಡಲು ಯೋಗ್ಯವಾಗಿದೆ. ಹಣ್ಣಿನ ಗಾತ್ರ ದೊಡ್ಡದಾಗಿದ್ದು (1.5 ರಿಂದ 3 ಕಿ.ಗ್ರಾಂ), ಎಲೆಗಳಲ್ಲಿ ಮುಳ್ಳುಗಳಿರುವುದಿಲ್ಲ.

**ಕ್ವೀನ್ :** ಈ ತಳಿಯ ಹಣ್ಣು ತಾಜಾ ಸೇವನೆಗೆ ಒಳ್ಳೆಯದಿದ್ದು, ಹಣ್ಣಿನ ಗಾತ್ರ ಚಿಕ್ಕದಾಗಿದ್ದು ಬಹಳ ರುಚಿಯಾಗಿರುತ್ತದೆ. ಎಲೆಗಳಲ್ಲಿ ಮುಳ್ಳುಗಳಿದ್ದು, ಹಣ್ಣಿನ ತೂಕ 0.5 ರಿಂದ 1.0 ಕಿ.ಗ್ರಾಂ ಇರುತ್ತದೆ.

**ಬೇಸಾಯ ಸಾಮಾಗ್ರಿಗಳು**

- ❖ ಅಂತರ (ಅಡಿ) ಜೋಡಿ ಸಾಲು ವಿಧಾನದಲ್ಲಿ : 3 x 2 x 1 (18,000 ಕಂದುಗಳು ಅಥವಾ ಸ್ಲಿಪ್‌ಗಳು/ಎಕರೆಗೆ)
- ❖ ಕೊಟ್ಟಿಗೆ/ ಕಾಂಪೋಸ್ಟ್ ಗೊಬ್ಬರ: 12 ಟನ್/ಎಕರೆ
- ❖ ರಾಸಾಯನಿಕ ಗೊಬ್ಬರಗಳು:(ಕಿ.ಗ್ರಾಂ/ಪ್ರತಿ ಎಕರೆಗೆ): ಸಾರಜನಕ – 210, ರಂಜಕ – 52, ಪೊಟ್ಯಾಷ್ – 70

**ನೆಡುವ ಸಸಿಗಳು:** ಕಂದುಗಳು, ಸ್ಲಿಪ್ (ಬಗಲು ಮರಿ) ಮತ್ತು ಕ್ರೌನ್ (ತುದಿ ಮರಿ) ಇವು ನಾಟಿಗೆ ಬಳಸುವ ಪ್ರಮುಖ ಸಸ್ಯ ಭಾಗಗಳು. ಕಂದುಗಳು ಗಿಡದ ಪಕ್ಕದಲ್ಲಿ ಬುಡದಿಂದ ಬರುವ ಕವಲುಗಳು. ಸ್ಲಿಪ್‌ಗಳು ಹಣ್ಣಿನ ಕೆಳಭಾಗದಲ್ಲಿ ಕವಲುಗಳಂತೆ ಬರುತ್ತವೆ. ಕ್ರೌನ್‌ಗಳು ಹಣ್ಣಿನ ಮೇಲ್ಭಾಗದಲ್ಲಿ ಇರುತ್ತವೆ. ಕಂದು ಮತ್ತು ಸ್ಲಿಪ್‌ಗಳನ್ನು ನಾಟಿಗೆ ಉಪಯೋಗಿಸುವುದರಿಂದ ಕ್ರೌನ್‌ಗಳಿಗಿಂತ ಬೇಗ ಇಳುವರಿ ಬರುತ್ತದಲ್ಲದೇ ಹಣ್ಣಿನ ಗಾತ್ರ ಕೂಡ ದೊಡ್ಡದಿರುತ್ತದೆ. ದೊಡ್ಡಗಾತ್ರದ ಕಂದುಗಳು ಮತ್ತು ಸ್ಲಿಪ್‌ಗಳು ನಾಟಿಗೆ ಯೋಗ್ಯವಲ್ಲ. ನಾಟಿಗೆ ಮುಂಚೆ ಕಂದು ಮತ್ತು ಸ್ಲಿಪ್‌ಗಳನ್ನು ಕೆಳಮುಖವಾಗಿ ನೆರಳಿನಲ್ಲಿ ಜೋಡಿಸಿಡಬೇಕೆ ವಿನಃ ಒತ್ತಾಗಿ ಗುಂಪು ಮಾಡಿ ಇಡಬಾರದು. ನಾಟಿಗೆ ಮುಂಚೆ ಕೆಳಗಿನ ಒಂದೆರಡು ಎಲೆಗಳನ್ನು ತೆಗೆದು ಹಾಕಿ ಕೆಳಭಾಗವನ್ನು ಕೀಟನಾಶಕ ಮತ್ತು ಶಿಲೀಂದ್ರನಾಶಕಗಳಿಂದ ಉಪಚರಿಸಿದರೆ ಹಿಟ್ಟು ತಿಗಣೆ ಮತ್ತು ಕಾಂಡ ಕೊಳೆ ರೋಗವನ್ನು ತಡೆಗಟ್ಟಬಹುದು




**ನಾಟಿ ಮಾಡುವ ವಿಧಾನ :** ಅನಾನಸ್ ನಾಟಿ ಮಾಡವ ಪ್ರದೇಶವನ್ನು ಉಳುಮೆ ಮಾಡಿ ಹರಿ ಮತ್ತು ಬೋದುಗಳನ್ನು ಒಂದಾದ ನಂತರ ಒಂದರಂತೆ ತಯಾರಿಸಬೇಕು. ಬೆಟ್ಟ ಪ್ರದೇಶಗಳಲ್ಲಿ ಇಳುಕಲಿಗೆ ಅಡ್ಡವಾಗಿ ಹರಿಗಳನ್ನು ತೆಗೆಯಬೇಕು. ಹರಿಗಳ ಅಳತೆ 3 ಅಡಿ ಅಗಲ, 8 ಅಂಗುಲದಿಂದ 1 ಅಡಿ ಆಳ ಮತ್ತು ಅನುಕೂಲಕ್ಕೆ ತಕ್ಕ ಉದ್ದವಿರುವಂತೆ ತೆಗೆಯಬೇಕು. ನಂತರ ಹರಿ ಮತ್ತು ಬೋದುಗಳನ್ನು ಮಾಡಿಕೊಳ್ಳಬೇಕು. ಹರಿಗಳಲ್ಲಿ ಮೇಲ್ಮಣ್ಣು ಮತ್ತು ಕೊಟ್ಟಿಗೆ ಗೊಬ್ಬರ ಹಾಕಿ ಚೆನ್ನಾಗಿ ಬೆರೆಸಬೇಕು. ಹರಿಗಳು ಒಂದಕ್ಕೊಂದು 2 ಅಡಿ ಅಂತರದಲ್ಲಿರಬೇಕು. ನಂತರ ಪ್ರತಿ ಹರಿಯಲ್ಲಿ ಕಂದು/ಸ್ಲಿಪ್‌ಗಳನ್ನು ಎರಡು ಸಾಲುಗಳಲ್ಲಿ, ಸಾಲುಗಳ ಮಧ್ಯೆ 2 ಅಡಿ ಮತ್ತು ಸಾಲುಗಳಲ್ಲಿ ಒಳಗೆ 1 ಅಡಿ ಅಂತರ ಇರುವಂತೆ ಕರ್ಣಾಕೃತಿಯಲ್ಲಿ ನಾಟಿ ಮಾಡಬೇಕು. ನಂತರ ಹಸಿ ಮಣ್ಣನ್ನು ಸಸಿಗಳ ಸುತ್ತಲೂ ಚೆನ್ನಾಗಿ ಒತ್ತಬೇಕು. ನಾಟಿ ಮಾಡುವಾಗ ಮಣ್ಣು ಸಸಿಯ ಸುಳಿಯಲ್ಲಿ ಬೀಳದಂತೆ ಎಚ್ಚರ ವಹಿಸಿ, ನಾಟಿ ಮಾಡಿದ ನಂತರ ನೀರನ್ನು ಒದಗಿಸಬೇಕು.

**ಅಚಿತರ ಬೇಸಾಯ:** ಗೊಬ್ಬರಗಳನ್ನು ಒದಗಿಸುವುದು, ಕಳೆ ತೆಗೆಯುವುದು, ಮಣ್ಣು ಏರಿಸುವುದು ಮತ್ತು ನೀರಾವರಿ ಮುಂತಾದವು ಪ್ರಮುಖ ಬೇಸಾಯ ಕ್ರಮಗಳು. ನಾಟಿ ಸಮಯದಲ್ಲಿ ಪೂರ್ತಿ ಪ್ರಮಾಣದ ರಂಜಕವನ್ನು ಕೊಡಬೇಕು. ಸಾರಜನಕ ಮತ್ತು ಪೊಟ್ಯಾಷ್ ಗೊಬ್ಬರಗಳನ್ನು ನಾಲ್ಕು ಸಮಕಂತುಗಳಲ್ಲಿ, ನಾಟಿ ಮಾಡಿದ ಮೂರು ತಿಂಗಳ ನಂತರ ಮೂರು ತಿಂಗಳಿಗೊಮ್ಮೆ ಒದಗಿಸಬೇಕು. ಪ್ರತಿ ಸಾರಿ ಗೊಬ್ಬರಗಳನ್ನು ಒದಗಿಸಿದಾಗ ಸಸಿಗಳ ಸುತ್ತಲೂ ಮಣ್ಣನ್ನು ಏರಿಸಬೇಕು. ಇದರಿಂದ ಸಸಿಗಳಿಗೆ ಉತ್ತಮ ಆಸರೆ ಸಿಗುತ್ತದೆಯಲ್ಲದೆ ಬೇರುಗಳು ಚೆನ್ನಾಗಿ ಬೆಳೆಯುತ್ತವೆ. ಹೊದಿಕೆ ಉಪಯೋಗಿಸಿ ಭೂಮಿಯಲ್ಲಿನ ನೀರು ಸಂರಕ್ಷಣೆ ಮತ್ತು ಕಳೆ ನಿಯಂತ್ರಣ ಮಾಡಬೇಕು. ಮಣ್ಣಿನ ಗುಣಧರ್ಮಕ್ಕನುಸಾರವಾಗಿ ಬೇಸಿಗೆಯಲ್ಲಿ ಪ್ರತಿ 15–20 ದಿನಗಳಿಗೊಮ್ಮೆ ನೀರನ್ನು ಒದಗಿಸಬೇಕು.